**Code No. 08 X(D)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಮಾನವರ ವ್ಯಕ್ತಿತ್ವದ ಸಂಪೂರ್ಣ ಬೆಳವಣಿಗೆಯ ಕಡೆಗೆ ಶಿಕ್ಷಣವು ನಿರ್ದೇಶಿತವಾಗಬೇಕು ಎಂದು ಮಾನವರ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದ ಘೋಷಣೆ ದೃಢಪಡಿಸುತ್ತದೆ. ನಿಷ್ಠೆಯುಳ್ಳ ಹಾಗೂ ಶ್ರದ್ಧಾವಂತರಾದ ಶಿಕ್ಷಕರ ತಂಡವು ಮಾತ್ರ ಈ ಗುರಿಯನ್ನು ಸಾಧಿಸಬಹುದು. ಬಹುಮಟ್ಟಿಗೆ ಶಿಕ್ಷಣ ಸಿಬ್ಬಂದಿಯವರ ಗುಣ ಮತ್ತು ಅರ್ಹತೆ ಹಾಗೂ ಸಾಮರ್ಥ್ಯ ಶಕ್ತಿಯ ಮೇಲೆ ಯಾವುದೇ ಶೈಕ್ಷಣಿಕ ಕಾರ್ಯಕ್ರಮದ ಯಶಸ್ಸು ಅವಲಂಬಿಸಿದೆ ಎಂಬ ಸಂಗತಿ ತಿಳಿದುಬಂದಿದೆ. ಉತ್ತಮ ಸ್ಥಾನಮಾನವನ್ನು ಹೊಂದಿದ ಮತ್ತು ಯಾರ ಕಾರ್ಯವು ಸಮಾಜದ ಶ್ರೀಸಾಮಾನ್ಯರ ಹಿತ ಮತ್ತು ಬೆಳವಣಿಗೆಗೆ ಮಹತ್ವಪೂರ್ಣವೂ, ಪ್ರಮುಖವೂ ಆಗಿದೆ ಎಂದು ಪರಿಗಣಿತವಾಗಿದೆಯೋ, ಅಂತಹ ಮತ್ತು ಸಮಾಜದ ಕಲ್ಯಾಣಕಾರ್ಯದಲ್ಲಿ ಸೇವೆ ಸಲ್ಲಿಸುವ ಮಹಾಪುರುಷರಿಗೆ ಸರಿಸಮನಾದ ಸ್ಥಾನವನ್ನು ನೀಡಲಾಗಿರುವಂತಹ ಶಿಕ್ಷಕನು ಮಾತ್ರ ಇಂತಹ ಬಹು ಮುಖ್ಯವಾದ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲನು. ಶಿಕ್ಷಕರ ಪಾತ್ರದ ಪರಿಣಾಮ ಸಮಾಜದಲ್ಲಿ ಅವನಿಗಿರುವ ಸ್ಥಾನಮಾನದ ಪ್ರಮಾಣಕ್ಕನುಗುಣವಾಗಿರುತ್ತದೆ.

ಭಾರತದಲ್ಲಿ ಇಂದು ಶಿಕ್ಷಕರ ಸ್ಥಾನಮಾನವೇನು ? ಈ ಪ್ರಶ್ನೆಯನ್ನು ಉತ್ತರಿಸುವುದಕ್ಕಿಂತ ಮೊದಲು ಭಾರತೀಯ ಶಿಕ್ಷಕರ ಪ್ರಸಕ್ತ ಸ್ಥಾನಮಾನವೇನೆಂದು ಗ್ರಹಿಸಬೇಕಾದರೆ, ನಾವು ಸ್ವಲ್ಪಮಟ್ಟಿಗೆ ಗತ ಇತಿಹಾಸದ ಸಂಕ್ಷಿಪ್ತ ಅವಲೋಕನ ಮಾಡುವುದು ಸೂಕ್ತ. ನಮ್ಮ ದೇಶವು ತನ್ನ ಇತಿಹಾಸದ ಉದ್ದಕ್ಕೂ ಅದರ ವ್ಯಾಸಂಗ, ಪ್ರೇಮ ಹಾಗೂ ಇಲ್ಲಿನ ಶಿಕ್ಷಕರಿಗೆ ನೀಡಿರುವ ಉನ್ನತ ಸ್ಥಾನಮಾನಗಳಿಗೆ ಹೆಸರುವಾಸಿಯಾಗಿದೆ. ವಾಸ್ತವವಾಗಿ ಅತಿ ಪ್ರಾಚೀನ ಕಾಲದಿಂದಲೂ ಭಾವೀ

[ Turn over

ಪೀಳಿಗೆಯನ್ನು ರೂಪಿಸುವ ಮಹಾನ್ ಕಾರ್ಯದಲ್ಲಿ ಶಿಕ್ಷಕನ ಪಾತ್ರವೇನೆಂಬುದನ್ನು ಗುರುತಿಸಲಾಗಿದೆ. ಸಂತ ಕವಿಯಾದ ತುಲಸೀದಾಸನು ಗುರು ಮತ್ತು ಗೋವಿಂದ, ಇವರಿಬ್ಬರಲ್ಲಿ ಯಾರಿಗೆ ನಮಸ್ಕರಿಸಬೇಕಾಗಿದೆಯೆಂದರೆ ಗುರುವಿಗೆ ಏಕೆಂದರೆ ಗುರುವೇ ಗೋವಿಂದನನ್ನು ಕಾಣುವ ಮಾರ್ಗವನ್ನು ತೋರಿಸಿದವನಾಗಿದ್ದಾನೆ ಎಂದು ಹೇಳಿದ್ದಾನೆ. ಇತಿಹಾಸದ ಪುಟಗಳಲ್ಲಿ ಎಲ್ಲೂ ಶಿಕ್ಷಕನ ಪಾತ್ರವನ್ನು ಕನಿಷ್ಠತಮವೆಂದು ಪರಿಗಣಿಸಿರುವುದು ಕಂಡುಬರುವುದಿಲ್ಲ. ನಮ್ಮ ಪ್ರಾಚೀನ ಸಂಪ್ರದಾಯಗಳಲ್ಲಿ ಮತ್ತು ಸಂಸ್ಕೃತಿಯಲ್ಲಿ ಗುರುವಿಗೆ ಉನ್ನತ ಸ್ಥಾನವನ್ನು ನೀಡಲಾಗಿದೆ.

ತಾವು ಕಾರ್ಯ ನಿರ್ವಹಿಸುತ್ತಿದ್ದ ಗ್ರಾಮೀಣ ಪ್ರದೇಶಗಳಲ್ಲಿ ಗುರುವಿಗೆ ವಿಶೇಷ ಗೌರವ ದೊರೆಯುತ್ತಿತ್ತು. ಮಾತ್ರವಲ್ಲದೆ, ಸಮಾಲೋಚನೆಯ ಸಲುವಾಗಿ ಕುಲೀನರೂ, ಶ್ರೀಮಂತರೂ ಮತ್ತು ರಾಜ ಮಹಾರಾಜರು ಗುರುಗಳನ್ನು ಆಹ್ವಾನಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಶಿಕ್ಷಕನನ್ನು ಗುರುವೆಂದು ಕರೆಯಲಾಗುತ್ತಿತ್ತು. ವ್ಯಕ್ತಿಯ ಹಾಗೂ ಸಾಮಾಜಿಕ ಜೀವನದ ಎಲ್ಲೆಡೆಗಳಲ್ಲೂ ಗುರುಗಳ ಅಧಿಕಾರ ವ್ಯಾಪ್ತಿ ಇತ್ತು. ಮನುಷ್ಯರಲ್ಲಿನ ಸದ್ಗುಣಗಳನ್ನು ಪ್ರಕಾಶಗೊಳಿಸುವ ಮಹಾನ್ ಕಾರ್ಯವನ್ನು ಗುರುಗಳಿಗೆ ವಹಿಸಿಕೊಡಲಾಗಿತ್ತು. ಆದರೆ ವ್ಯಕ್ತಿಯನ್ನು ಮೋಕ್ಷ ಅಥವಾ ಮುಕ್ತಿಗಾಗಿ ಸಜ್ಜುಗೊಳಿಸುವುದೇ ಗುರುವಿನ ಬಹುಮುಖ್ಯ ಕಾರ್ಯವಾಗಿತ್ತು. ಆದ್ದರಿಂದ ಗುರುವನ್ನು ದೇವರಿಗೆ ಸಮಾನರೆಂದು ಪೂಜಿಸಲಾಗುತ್ತಿತ್ತು. ಗುರುವಿನ ಅನುಗ್ರಹದಿಂದ ದೊರೆತ ಜ್ಞಾನದ ಅಥವಾ ಅರಿವಿನ ಮೂಲಕ ವ್ಯಕ್ತಿಯು ಸತ್ಯ ಮತ್ತು ಭಗವಂತನ ನೈಜ ಸ್ವರೂಪವನ್ನು ಗ್ರಹಿಸಬಹುದಾಗಿತ್ತು. ಹಿಂದೆ ರಾಜನು ಗುರುವಿಗೆ ಗೌರವ ಪುರಸ್ಸರವಾಗಿ ತಲೆಬಾಗಿ ವಂದಿಸಿ, ಆದರಿಸುತ್ತಿದ್ದನು.

ವಿದ್ಯಾರ್ಥಿಯು ತನ್ನ ಸಾಮರ್ಥ್ಯ, ಶಕ್ತಿಗಳನ್ನು ಹಾಗೂ ವ್ಯಕಿತ್ವ ವಿಶೇಷಗಳನ್ನು ಅರಿತುಕೊಳ್ಳಲು ಮತ್ತು ಉಪಯುಕ್ತವಾದ ಮಾರ್ಗದಲ್ಲಿ ಮುಂದುವರಿಯಲು ತನ್ನ ವ್ಯಯಕ್ತಿಕ ಗುರಿಗಳ ಸಂಬಂಧದಲ್ಲಿ ತನ್ನತನವನ್ನು ಕಂಡುಕೊಳ್ಳಲು ಹಾಗೂ ಅದಕ್ಕಿಂತ ಮಿಗಿಲಾಗಿ ಸಮಾಜದ ಅಭ್ಯುದಯವನ್ನು ಸಾಧಿಸಲು ಮತ್ತು ಅಂತಿಮವಾಗಿ ಪ್ರಬುದ್ಧಾವಸ್ಥೆಯನ್ನು ತಲುಪಲು, ಮಾರ್ಗದರ್ಶನದ ಲಕ್ಷಣ ನಿರೂಪಣೆಗನುಗುಣವಾಗಿ ತನ್ನ ಸಮಸ್ಯೆಗಳನ್ನು ತಾನೇ ಪರಿಹರಿಸಲು ಹಾಗೂ ಉತ್ತಮವಾದ ಸ್ವಯಂ ಮಾರ್ಗದರ್ಶನ ಪಡೆಯಲು ಸಮರ್ಥನನಾಗಿ ಮಾಡುವ ಸಮಸ್ತ ಕ್ರಿಯಾಚಟುವಟಿಕೆಗಳನ್ನು ಒಳಗೊಂಡಿದೆ.